ನವಂಬರ್ 2023

# ಸೇವಾ ವಾಣಿ

## ಸೇವಾ ಸಂಗಮ

## ಆರ್ಬಿಟ್








ಪೂಜ್ಯ ರಾಬರ್ಟ್ ಮಿರಾಂಡಾ
ಗುಲ್ಬರ್ಗ ಧರ್ಮಾಧ್ಯಕ್ಷರು

ಫಾ. ವಿಕ್ಟರ್ ವಾಸ್
ನಿರ್ದೇಶಕರು

## ಉತ್ತಮ ಜೀವನಕ್ಕಾಗಿ ಉತ್ತಮ ಕಣ್ಣುಗಳು

“ಆರೋಗ್ಯವೇ ಭಾಗ್ಯ” ಅದರಲ್ಲೂ ಮುಖ್ಯವಾಗಿ ದೃಷ್ಟಿ ಎನ್ನುವದು ನಮ್ಮ ಜೀವನಕ್ಕೆ ದಾರಿದೀಪವಾಗಿದೆ, ಈ ಶಿಬಿರದಲ್ಲಿ ಭಾಗವಹಿಸಿ ಸದುಪಯೋಗವನ್ನು ಪಡೆದುಕೊಳ್ಳುವಂತೆ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ವಿಜಯಕುಮಾರ್ ಪ್ರೇರೆಪಿಸಿದರು. ಮಹಿಳಾ ಸಭಲೀಕರಣ ಕಾರ್ಯಯೋಜನೆಯ ಸ್ಥಳಿಯ ಸಂಯೋಜಕಿಯಾದ ಸಿಸ್ಟರ್. ಏಡ್ನಾ ರವರು ಆರ್ಬಿಟ್ ಸಂಸ್ಥೆಯು ಮಾಡುವಂತಹ ಸಮಾಜ ಸೇವೆಯ ಕಾರ್ಯಗಳ ಕುರಿತು ಪ್ರಾಸ್ಥವಿಕವಾಗಿ ನುಡಿದರು. ಅಕ್ಟೋಬರ್ 17.2023 ರಂದು ಬಸವಕಲ್ಯಾಣ ತಾಲೂಕಿನ ಜ್ಞಾನಪ್ರಿಯ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಹಾಗೂ ವೆಲೆಮೆಗ್ನಾ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರವು ಹಮ್ಮಿಕೊಳ್ಳಲಾಯಿತು. ಈ ಶಿಬಿರದಲ್ಲಿ 30 ಜನರು ತಪಾಸಣೆ ಮಾಡಿಸಿಕೊಂಡರು. 10 ಜನರಿಗೆ ಕಣ್ಣಿನ ಪೋರೆ ಬಂದಿರುವುದರಿಂದ ಮುಂದಿನ ಶಸ್ತ್ರಚಿಕಿತ್ಸೆಗೆ ಹೋಗಬೇಕೆಂದು ತಿಳಿಸಿದರು.





Organization of Bidar Integral Transformation, ORBIT, NH 65, Near Railway Sation, Humnabad 585330
Web: www.orbitbidar.org E.mail: orbitbidar93@gmail.com Facebook:orbitbidar

# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ

## “ವಿಶೇಷ ವಿಕಲ ಚೇತನ ಪೋಷಕರ ತರಬೇತಿ”



ಅಕ್ಟೋಬರ್ 19.2023 ರಂದು ಹುಮನಾಬಾದ ತಾಲೂಕಿನ ಜಲಸಿಂಗಿ ಗ್ರಾಮದಲ್ಲಿ **“ವಿಶೇಷ ವಿಕಲ ಚೇತನ ಪೋಷಕರ ತರಬೇತಿಯನ್ನು”** ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತೆಯಾದ ಶ್ರೀಮತಿ ಕವಿತಾ ಹಮ್ಮಿಕೊಂಡ್ಡಿದರು. ವಿಶೇಷ ವಿಕಲ ಚೇತನ ಮಕ್ಕಳಿಗೆ ಚಟುವಟಿಕೆ ಮಾಡಿಸುವುದರ ಮೂಲಕ ಬದಲಾವಣೆ ಹಂತಕ್ಕೆ ತರಬಹುದು, ವಿಶೇಷ ವಿಕಲ ಚೇತನ ಮಕ್ಕಳು ಹುಟ್ಟಲಿಕೆ ಕಾರಣಗಳು ಏನು? ಹಾಗೂ ಸರಕಾರದಿಂದ ಸಿಗುವಂತಹ ಸೌಲಭ್ಯಗಳ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿ ನೀಡಿ, ಅವುಗಳನ್ನು ದೊರಕಿಸಿ ಕೊಡುವುದರಲ್ಲಿ ನಮ್ಮ ಆರ್ಬಿಟ್ ಸಂಸ್ಥೆಯು ಕಾರ್ಯ ನಿರ್ವಹಿಸುತಿದೆ ಎಂದು ಪೋಷಕರಿಗೆ ಶ್ರೀಮತಿ ಕವಿತಾರವರು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಾಗಿ ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಹಾಗೂ ಗ್ರಾಮ ಪಂಚಾಯತಿನ ಅಧ್ಯಕ್ಷರು ಶ್ರೀಮತಿ ಗೋಪ್ಯಮ್ಮ ಹಾಗೂ ಗ್ರಾಮಸ್ಥರು ಸೇರಿ 40 ಜನ ಭಾಗವಹಿಸಿದರು.

## .“ಆರೋಗ್ಯ ಮೇಳಾ ಕಾರ್ಯಕ್ರಮ”



ದಿನಾಂಕ 17.10.2023 ರಂದು ಹುಮ್ನಾಬಾದ್ ತಾಲೂಕಿನ ಹಣಕುಣಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತರಾದ ಶ್ರೀ ಸುರ್ಯಾಕಾಂತ ರವರ ನೇತ್ರತ್ವದಲ್ಲಿ **“ಆರೋಗ್ಯ ಮೇಳಾ ಕಾರ್ಯಕ್ರಮ”** ಏರ್ಪಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಸಮುದಾಯ ಆರೋಗ್ಯ ಅಧಿಕಾರಿಗಳಾದ ಫಾ. ಎಸ್.ಕೆ ಆಸಿಫ್ ಭಾಗವಹಿಸಿ ಕಾರ್ಯಕ್ರಮ ಕುರಿತು ಮಾತನಾಡಿ, ಮನುಷ್ಯನು ತನ್ನ ಲಾಭದ ಆಶೆಗಾಗಿ ಅನೇಕ ವಿಧವಾದ ಮಾರ್ಗದಲ್ಲಿ ಸಾಗುತಿದ್ದಾನೆ ಬೇಳೆಗಳು, ಹಣ್ಣುಗಳು ಮತ್ತು ತರಕಾರಿಗಳಿಗೆ ರಾಸಾಯನಿಕ ಔಷದಗಳನ್ನು ಮತ್ತು ಚುಚ್ಚು ಮದ್ದುಗಳನ್ನು ಬಳಸಿ ತನ್ನ ಆರೋಗ್ಯವನ್ನು ಹದಗೇಡುವಂತ ಕೆಲಸ ಕಾರ್ಯಗಳು ಮಾಡುತ್ತಾನೆ, ಆದರಿಂದ ಮನೆ ಗೊಬ್ಬರಗಳನ್ನು ಉಪಯೋಗಿಸಿ ಆರೋಗ್ಯವಂತರಾಗಿ ಜೀವಿಸಬೇಕು ಎಂದು ಸಲಹೆ ನೀಡಿದರು. ಈ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿಗಳು, ಗ್ರಾಮದ ಜನರು ಭಾಗವಹಿಸಿದರು

## “ಸ್ವಚ್ಚ ಭಾರತ ಅಭೀಯಾನ ಕಾರ್ಯಕ್ರಮ”



ಅಕ್ಟೋಬರ್ 01.2023 ರಂದು ಹುಮನಾಬಾದ ತಾಲೂಕಿನ ಸಿತಾಳಗೇರಾ ಗ್ರಾಮ ಪಂಚಾಯತಿಯಲ್ಲಿ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮದ ಸಂಯೋಜಕರಾದ ಶ್ರೀಮತಿ ಮಮತಾ ರವರು ಸ್ವಚ್ಚ ಭಾರತ ಅಭೀಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ವಚ್ಚತೆ ಬಗ್ಗೆ ಪ್ರತಿಜ್ಞೆ ಮೂಲಕ ಎಲ್ಲರಲ್ಲಿ ಜಾಗೃತಿ ಮೂಡಿಸಿದರು. ನಮ್ಮ ಸುತ್ತ ಮುತ್ತಲಿನ ಪರಿಸರವನ್ನು ಕಾಪಾಡಿಕೊಂಡು ಸ್ವಚ್ಚವಾಗಿ ಇಟ್ಟುಕೊಂಡು ಆರೋಗ್ಯ ವಂತರಾಗಿ ಇರಬೇಕು ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ರಮೇಶ, ಅದ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಆರ್ಬಿಟ್ ಸಂಸ್ಥೆಯ ಮಹಿಳಾ ಅಭಿವೃದ್ಧಿ ಕಾರ್ಯಕರ್ತೆಯಾದ ಶ್ರೀಮತಿ ಅಮಿತಾ ಹಾಗೂ ಗ್ರಾಮಸ್ಥ ಮುಖಂಡರು ಸೇರಿ 28 ಜನರು ಉಪಸ್ಥಿತರಿದ್ದರು.

.



# ಮಹಿಳಾಭಿವೃದ್ಧಿ ಕಾರ್ಯಕ್ರಮ

## "ಸಂವಿಧಾನ ಮೌಲ್ಯಗಳ ಕುರಿತು ತರಬೇತಿ"

ದಿನಾಂಕ 10.10.2023 ರಂದು ನಿಂಬೂರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಮಹಿಳಾ ಸಭಲೀಕರಣ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಅಮಿತಾ ರವರು ಸಂವಿಧಾನ ಮೌಲ್ಯಗಳ ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀಮತಿ ರೀಟಾ ಮಹಿಳಾ ಸಭಲೀಕರಣ ಕಾರ್ಯಕರ್ತೆಯವರು ಸಂವಿಧಾನ ಪೀಠಿಕೆ ಹೇಳುವುದರ ಮೂಲಕ ಮಹಿಳೆಯರಲ್ಲಿ ಭ್ರಾತೃತ್ವ ಭಾವನೆ ಮೂಡಿಸಿದರು. ಈ ತರಬೇತಿಯಲ್ಲಿ 15 ಮಹಿಳೆಯರು ಭಾಗವಹಿಸಿ ಸಮಾನತೆ, ಧರ್ಮನಿರಾಪೇಕ್ಷ, ಸತು ಸಮಾಜವಾದಿ ವಿಷಯಗಳ ಸಾರಂಶವನ್ನು ತಿಳಿದುಕೊಂಡ್ಡರು.



## "ಜಾಗತಿಕ ತಾಪಮಾನ ಕುರಿತು ತರಬೇತಿ"



ದಿನಾಂಕ 03.10.2023 ರಂದು ಡೋಣಗಪುರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಮಹಿಳಾ ಸಭಲೀಕರಣ ಕಾರ್ಯಕ್ರಮದ ಸ್ಥಳಿಯ ಸಂಯೋಜಕರಾದ ಸಿಸ್ಟರ್ ಜೀವಲತಾ ಹಾಗೂ ಕಾರ್ಯಕರ್ತೆಯಾದ ಶ್ರೀಮತಿ ಸುಜಾತಾ ರವರು 06 ಸ್ವ-ಸಹಾಯ ಸಂಘಗಳ ಮಹಿಳೆಯರಿಗೆ ಜಾಗತಿಕ ತಾಪಮಾನ ಕುರಿತು ತರಬೇತಿ ನೀಡಿದರು. ಸಂಘಗಳು ಸ್ಥಾಪಿಸುವ ಗುರಿ ಉದ್ದೇಶಗಳ ಕುರಿತು ಹಾಗೂ ಮಹಾಸಂಘ ಬಲವರ್ಧನೆ ಕುರಿತು ಮಾಹಿತಿ ನೀಡಿದರು. ವಿಶೇಷ ವಿಕಲಚೇತನರಿಗೆ ಸಿಗುವ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 41 ಮಹಿಳೆಯರು ಭಾಗವಹಿಸಿದರು.

## "ಮಹಿಳಾ ಹಕ್ಕುಗಳ ತರಬೇತಿ"

ಭಾಲ್ಕಿ ತಾಲೂಕಿನ ಕೋಸಂ ಗ್ರಾಮದಲ್ಲಿ 06 ಅಕ್ಟೋಬರ್ 2023 ರಂದು ಆರ್ಬಿಟ್ ಸಂಸ್ಥೆಯ ಮಹಿಳಾ ಸಭಲೀಕರಣ ಕಾರ್ಯಕ್ರಮದ ಸ್ಥಳಿಯ ಸಂಯೋಜಕರಾದ ಸಿಸ್ಟರ್ ಜೀವಲತಾ ಹಾಗೂ ಕಾರ್ಯಕರ್ತೆಯಾದ ಶ್ರೀಮತಿ ಗೀತಾ ರವರು ಮಹಿಳಾ ಹಕ್ಕುಗಳ ಕುರಿತು ತರಬೇತಿ ಹಮ್ಮಿಕೊಂಡಿದರು. ಮಹಿಳೆಯರು ಪುರುಷರು ಎಂಬ ಭೇದಭಾವ ಮಾಡದೆ ಸಮಾನವಾದ ಹಕ್ಕುಗಳನ್ನು ಪಡೆದುಕೊಂಡು ಧೈರ್ಯಶಾಲಿಗಳಾಗಿ ಸಮಾಜದಲ್ಲಿ ನೀಲ್ಲುವಂತರಾಗಬೇಕು. ಸಂಘ ಮಹಾ ಸಂಘಗಳು ಬಲವರ್ಧನೆ ಹೊಂದಬೇಕು. ಸರ್ಕಾರಿ ಸೌಲಭ್ಯಗಳು ಹೊಂದುಕೊಳ್ಳೂವುದರಲ್ಲಿ ಮುಂದಾಗಬೇಕು ಎಂದು ಹೇಳಿದರು. ಈ ತರಬೇತಿಯಲ್ಲಿ 23 ಮಹಿಳೆಯರು ಭಾಗವಹಿಸಿದರು.



## "ಜಿಲ್ಲಾ ಒಕ್ಕೂಟ ಸಭೆ"






19 ಅಕ್ಟೋಬರ್ 2023 ರಂದು ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ಜಿಲ್ಲಾ ಒಕ್ಕೂಟ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಅತಿ ಒಂದನೆಯ ಫಾದರ್ ವಿಕ್ಟರ್ ವಾಸ್ ನಿರ್ದೇಶಕರು ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಇವರು ಮಾತನಾಡುತ್ತಾ, ಸಂಘ, ಮಹಾಸಂಘ, ತಾಲೂಕ ಒಕ್ಕೂಟ ಮತ್ತು ಜಿಲ್ಲಾ ಒಕ್ಕೂಡ ಮಾಡುವ ಉದ್ದೇಶ ಕುರಿತು ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಮತ್ತು ತಾಂತ್ರಿಕವಾಗಿ ಐದು ರಂಗಗಳಲ್ಲಿ ಸಬಲರಾಗಿ ನಾಯಕತ್ವದ ಜವಾಬ್ದಾರಿಯನ್ನು ತರಗೆದುಕೊಂಡು ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಪ್ರೇರಣೆ ನೀಡಿದರು. ಜಿಲ್ಲಾ ಒಕ್ಕೂಟ ಸಭೆಯಲ್ಲಿ ಮಹಾಸಂಘದ ನಾಲ್ಕು ಜನಪ್ರಿಯ ಅಧಿಕಾರಿಗಳು ಆರ್ಬಿಟ್ ಸಂಸ್ಥೆಯ ಅಡಿಯಲ್ಲಿ ಸಂಘವನ್ನು ರಚಿಸಿದ ಪರಿಣಾಮವಾಗಿ ಅವರ ಕುಟುಂಬದಲ್ಲಾದ ಬದಲಾವಣೆಗಳನ್ನು ಕುರಿತು ಹೆಮ್ಮೆಯಿಂದ ಮಾತನಾಡಿದರು. ಈ ತರಬೇತಿಯಲ್ಲಿ ಮಹಿಳಾ ಅಭಿವೃದ್ಧಿ ಕಾರ್ತಕ್ರಮದ ಸಂಯೋಜಕರು, 06 ಜನ ಕಾರ್ಯಕರ್ತರು, ಸ್ಥಳಿಯ ಸಂಯೋಜಕರು ಹಾಗೂ 31 ಪದಾಧಿಕಾರಿಗಳು ಭಾಗವಹಿಸಿ ಜಿಲ್ಲಾ ಒಕ್ಕೂಟದ ಗುರಿ ಉದ್ದೇಶಗಳ ಬಗ್ಗೆ ತಿಳಿದುಕೊಂಡರು.

21 ಅಕ್ಟೋಬರ್ 2023 ರಂದು ಚಿಟ್ಟಗುಪ್ಪಾ ತಾಲೂಕಿನ ನೀರ್ಣಾ ಗ್ರಾಮದಲ್ಲಿ ಸರ್ಕಾರಿ ಯೋಜನೆಗಳ ಕುರಿತು ತರಬೇತಿ ನೀಡಲಾಯಿತು. ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿರುವಂತಹ ಶ್ರೀಮತಿ ರೀಟಾ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರು ಸರ್ಕಾರದಿಂದ ಸಿಗುವಂತಹ ಲೇಬರ್ ಕಾರ್ಡ್, ವಿದ್ವಾ ವೇತನ, ಸಂಧ್ಯಾ ಸುರಕ್ಷಾ ಯೋಜನೆ ಮತ್ತು ರೈತ ಸಂಪರ್ಕ ಕೇಂದ್ರದಿಂದ ಸಿಗುವಂತಹ ವಿವಿಧ ಸೌಲಭ್ಯಗಳು ಕುರಿತು ತರಬೇತಿಯನ್ನು ನೀಡಲಾಯಿತು. ಈ ತರಬೇತಿಯಲ್ಲಿ ಸುಮಾರು 40 ಜನರು ಭಾಗವಹಿಸಿ ವಿವಿಧ ಸರಕಾರಿ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ವಿವಿಧ ಇಲಾಖೆಗಳಿಗೆ ಅಜಿ ಸಲ್ಲಿಸಲು ಮುಂದಾಗಿದ್ದಾರೆ.






## ನವಜೀವನ ಕಾರ್ಯಕ್ರಮ

### "ಅಂಗನವಾಡಿ ಕಾರ್ಯಕರ್ತೆಯರಿಗೆ ಆಪ್ತ ಸಮಾಲೋಚನೆಯ ತರಬೇತಿ"





ಹುಮ್ನಾಬಾದ್ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಸಂಯೋಗದಡಿಯ ಮಾನಸಿಕ ಅಸ್ವಸ್ಥರನ್ನು ಸಮುದಾಯ ಆಧಾರಿತವಾಗಿ ಪುನರ್ವಸತಿ ಗೊಳಿಸುವ ಕಾರ್ಯಕ್ರಮದ ಭಾಗವಾಗಿ ಅಂಗನವಾಡಿ ಕಾರ್ಯಕರ್ತೆಯರಿಗೆ 07 ಅಕ್ಟೋಬರ್ 2023 ರಂದು ಆಪ್ತ ಸಮಾಲೋಚನೆ ತರಬೇತಿ ಹಮ್ಮಿಕೊಳ್ಳಲಾಯಿತು. ತರಬೇತಿಯಲ್ಲಿ ಆರ್ಬಿಟ್ ಸಂಸ್ಥೆಯ ವ್ಯವಸ್ಥಾಪಕರಾದ ಸಿಸ್ಟರ್ ವಿಲ್ಮಾ ಮ್ಯಾಥ್ಯೂ ಮಾತನಾಡುತ್ತಾ, "ಮಾನಸಿಕ ಅಸ್ವಸ್ಥರನ್ನು ಪುನರ್ ವಸತಿಗೊಳಿಸುವ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಪಾತ್ರ ತುಂಬಾ ಅಗಾಧವಾದದ್ದು, ಸಂಸ್ಥೆಯ ಕಾರ್ಯಕ್ರಮಗಳಿಗೆ ತಾವು ತುಂಬಾ ಸಹಕಾರ ನೀಡುತ್ತಿದ್ದಿರಿ" ಎಂದು ನುಡಿದರು. "ಮಗುವಿನ ಜೀವನಕ್ಕೆ ಅಡಿಪಾಯ ಹಾಕುವಂಥ ಜವಾಬ್ದಾರಿ ನಿಭಾಯಿಸುತ್ತದ್ದಿರಿ, ನೀವು ಸರಕಾರದ ಉದ್ದೇಶ ಇಡೇರಿಸುವುದರ ಜೊತೆಗೆ ಮಗುವಿನ ಜೀವನವನ್ನು ರೂಪಿಸುವ ಕಾರ್ಯ ಮಾಡುತ್ತಿದ್ದಿರಿ" ಎಂದು ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ವಿಜಯಕುಮಾರ ಅಂಗನವಾಡಿ ಕಾರ್ಯಕರ್ತೆಯರನ್ನು ಉದ್ದೇಶಿಸಿ ಪ್ರಾಸ್ತವಿಕವಾಗಿ ನುಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಎಪಿಡಿ ಸಂಸ್ಥೆಯ ಸಂತೋಷ್ ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವವರನ್ನು ಸಮುದಾಯದಲ್ಲಿ ಗುರುತಿಸಿ ಆಪ್ತ ಸಮಾಲೋಚನೆ ಮಾಡುವ ಕೌಶಲ್ಯಗಳ ಕುರಿತು ವಿವರಿಸಿದರು. ಈ ಕಾರ್ಯಕ್ರಮದಲ್ಲಿ 48 ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿ ತರಬೇತಿ ಪಡೆದುಕೊಂಡರು. ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಪ್ರತಿನಿಧಿ ವೀರೇಶ್ ಹಾಗೂ ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ”ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ”




ದಿನಾಂಕ 12/10/2023 ರಂದು ಹುಮನಾಬಾದ ತಾಲೂಕಿನ ಅಲ್ಲೂರ ಗ್ರಾಮದ ಹನುಮಾನ ಮಂದಿರದ ಆವರಣದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜೀ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೋಳಳಲಾಯಿತ್ತು. ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ. ಪ್ರೀತಿರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಹಾಗೂ ಮಾನಸಿಕ ಕಾಯಿಲೆಯ ಬಗ್ಗೆ ಅರಿವನ್ನು ಮೂಡಿಸಲಾಯಿತು. ಈ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಸಿ.ಹೆಚ್.ಓ ಬೆನಚಿಂಚೊಳಿ, ಹೆಚ್.ಡಬ್ಲೂ.ಸಿ ಗ್ರಾಮ ಪಂಚಾಯತಿ ಸದಸ್ಯರು, ಮಾಜಿ ಅಧ್ಯಕ್ಷರು, ಊರಿನ ಹಿರಿಯ ಮುಖಂಡರು, ಅಂಗನವಾಡಿ ಕಾರ್ಯಕರ್ತೆರು ಆಶಾಕಾರ್ಯಕರ್ತೆರು ಹಾಗೂ ಗ್ರಾಮಸ್ಥರು ಒಟ್ಟು 42 ಜನರು ಭಾಗವಹಿಸಿದರು.




ಅಕ್ಟೋಬರ 21.2023 ರಂದು ಚಿಟ್ಟಗುಪ್ಪಾ ತಾಲ್ಲೂಕಿನ ನಿರ್ಣಾ ಗ್ರಾಮದ ಸರಕಾರಿ ಪ್ರಾಥಮಿಕ ಆಸ್ಪತ್ರೆಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜೀ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ **“ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ”** ಕಾರ್ಯಕ್ರಮ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿರುವ ಸಂತ ಲಾರ್ಸೆನ್ ಚರ್ಚನ ಸಹ ನಿರ್ದೇಶಕರಾದ ವಂದನೆಯ ಫಾದರ್ ಅವಿನಾಶ್ ರವರು ಮಾತನಾಡಿದರು. ಮಾನಸಿಕ ಕಾಯಿಲೆ ಎಂದರೇನು? ಮಾನಸಿಕ ಆರೋಗ್ಯ ಎಂದರನು? ಮಾನಸಿಕ ಕಾಯಿಲೆಯ ಗುಣಲಕ್ಷಣಗಳ ಬಗ್ಗೆ ತಿಳಿಸಿದರು. ಮಾನಸಿಕ ಅಸ್ವಸ್ಥರನ್ನು ಹೇಗೆ ಪುನರ್ವಸತಿಗೆ ತರಬಹುದು ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಗೀತಾ ಅಧ್ಯಕ್ಷರು ಗ್ರಾಮ ಪಂಚಾಯತ್ ನಿರ್ಣಾ, ಶ್ರೀ ಸಂಜುಕುಮಾರ ಉಪಾಧ್ಯಕ್ಷರು ಗ್ರಾಮ ಪಂಚಾಯತ ನಿರ್ಣಾ ಹಾಗೂ ಸರಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಡಾ. ಹೈದರ್‌ಖಾನ್ ಪಾಟಿಲ್ ಹಾಗೂ ಆಶಾ ಕಾರ್ಯಕರ್ತೆಯರು ಒಳಗೊಂದು 55 ಜನರು ಭಾಗವಹಿಸಿದರು.

ಅಕ್ಟೋಬರ್ 27 ರಂದು ಔರಾದ ತಾಲೂಕಿನ ಚಿಂತಾಕಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆ ಹುಮನಾಬಾದ ಹಾಗೂ ಎಲ್.ಎಲ್.ಎಫ್. ಫೌಂಡೇಶನ ಇವರ ಸಹಯೋಗದೊಂದಿಗೆ **‘ವಿಶ್ವ ಮಾನಸಿ ಆರೋಗ್ಯ ದಿನಾಚರಣೆ’** ಕಾರ್ಯಕ್ರಮವು ಹಮ್ಮಿಕೊಳಲಾಯಿತು. ಈ ಕಾರ್ಯಕ್ರದಲ್ಲಿ ಡಾ॥ ಗಾಯತ್ರಿ ವಿ ಸಿ.ಎಮ್.ಓ ಮಾತನಾಡಿ ಆರ್ಬಿಟ್ ಸಂಸ್ಥೆಯು ಮಾನಸಿಕ ಅಸ್ವಸ್ಥ ರೋಗಿಗಳನ್ನು ಪತ್ತೆ ಹಚ್ಚಿ ಅಪ್ತ ಸಮಾಲೋಚನೆ ಮಾಡಿ ಮನೋವೈದ್ಯರ ಬಲಿ ಸೂಕ್ತ ಚಿಕಿತ್ಸೆ ಕೊಡಿಸುತ್ತಿದ್ದಾರೆ, ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಲು ಕರೆ ನೀಡಿದರು. ಆರ್ಬಿಟ್ ಸಂಸ್ಥೆಯ ನಿರ್ದೇಶಕರು ಮಾತನಾಡಿ ಸಂಸ್ಥೆಯು ಈ ಒಂದು ಸಾಮಾಜೀಕ ಸೇವಾ ಸಂಸ್ಥೆ ಮಾನಸಿ ಅಸ್ವಸ್ಥರ ಸೇವೆ ಸಲ್ಲಿಸುತ್ತಿದ್ದು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು. ನವಜೀವನ (ಎಲ್.ಎಲ್.ಎಲ್. ಎಫ್) ಕಾರ್ಯಕ್ರಮದ ವ್ಯವಸ್ಥಾಪಕರಾದ ಫಾ. ಅನಿಲ ಕ್ರಾಸ್ತಾ ಮಾತನಾಡಿ ಸಂಕೋಚ ಪಡದೆ ಮಾನಸಿಕ ಕಾಯಿಲೆಗೆ ಚಿಕಿತ್ಸೆ ಪಡೆದುಕೊಳ್ಳಲು ಸಲಹೆ ನೀಡಿದರು. ಈ ಕಾರ್ಯಕ್ರಮದಲ್ಲಿ THO ಡಾ॥ ಗಾಯತ್ರಿ ವಿ, CMO ಸಚಿನ ಪಟ್ನೆ, ಆರ್ಬಿಟ್ ಸಂಸ್ಥೆಯ ನಿರ್ದೇಶಕರು ಫಾ. ವಿಕ್ಟರ್ ವಾಸ್ ನವಜೀವನ ಕಾರ್ಯಕ್ರಮದ ವ್ಯವಸ್ಥಾಪಕರು ಫಾ. ಅನಿಲ ಕ್ರಾಸ್ತಾ, ಆರೋಗ್ಯ ಇಲಾಖೆ ಸಿಬ್ಬಂದಿ ವರ್ಗದವರು, ಗ್ರಾಮ ಪಂಚಾಯತ ಅಧ್ಯಕ್ಷರು, ಉಪಾಧ್ಯಕ್ಷರು ಸದಸ್ಯರು, ಆಶಾ ಕಾರ್ಯಕರ್ತೆ ಹಾಗೂ ಅಂಗನವಾಡಿ ಕಾರ್ಯಕರ್ತೆ, ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮದ ಕಾರ್ಯಕರ್ತರು ಸೇರಿ 55 ಜನರು ಭಾಗವಹಿಸಿದರು.



## “ಮಾನಸಿಕ ಕಾಯಿಲೆ ಕುರಿತು ಜಾಗೃತಿ ಕಾರ್ಯಕ್ರಮ”



ಅಕ್ಟೋಬರ 03 ರಂದು ಹುಮನಾಬಾದ ತಾಲ್ಲೂಕಿನ ಹಳ್ಳಿಖೇಡ (ಬಿ) ಗ್ರಾಮದ ಸರಸ್ವತಿ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜೀ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಕಾಯಿಲೆ ಕುರಿತು ಮಕ್ಕಳಲ್ಲಿ ಜಾಗೃತಿ ಮೂಡಿಸಲಾಯಿತ್ತು. ನೀಲಕಂಠ ನವಜೀವನ ಕಾರ್ಯಕ್ರಮದ ಕಾರ್ಯಕರ್ತರು ಆಗಮಿಸಿ ಮಾಹಿತಿ ನೀಡುತ್ತಾ ಖಿನ್ನತೆ ಅನ್ನುವುದು ಒಂದು ಕಾಯಿಲೆ ಮೋದಲನೆ ಹಂತದ ಮಾನಸಿಕ ಕಾಯಿಲೆ (mild) ಕಡಿಮೆ ಪ್ರಮಾಣದಲ್ಲಿ ಇದ್ರೆ ಭಯಪಡುವ ಅವಶ್ಯಕತೆ ಪಡುವಂತಿಲ್ಲ. ಯೋಗ, ಚಟುವಟಿಕೆ ಹಾಗೂ ಜನರ ಜೋತೆ ಬೇರೆಯುವುದರಿಂದ ಖಿನ್ನತೆ ಅನ್ನುವ ಕಾಯಿಲೆ ಕಡಿಮೆ ಆಗುವ ಅವಕಾಶ ಇರುತ್ತದೆ ಎಂದು ತಿಳಿಸಲಾಯಿತ್ತು.

## “ಆಪ್ತ ಸಮಲೊಚನೆ ತರಬೇತಿ”



ದಿನಾಂಕ 28–10–2023 ರಂದು ಹುಮನಾಬಾದ ತಾಲೂಕಿನ ಆರ್ಬಿಟ್ ಸಂಸ್ಥೆಯಲ್ಲಿ ಮಾನಸಿಕ ಅಸ್ವಸ್ಥರ ಪುನರ್ವಸತಿ ಕಾರ್ಯಕ್ರಮದ ಸಿಬ್ಬಂದಿ ವರ್ಗದವರಿಗೆ ಆಪ್ತ ಸಮಲೊಚನೆ ತರಬೇತಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದಂತಹ ಫಾದರ ವಿನ್ಸೆಂಟ ಫಿರೇರಾ (ಮದರ ತೇರೆಸಾ ಗುಲ್ಬರ್ಗಾ) ಅವರು ಆಪ್ತ ಸಮಲೋಚನೆ ಮಾಡುವ ವಿಧಾನದ ಬಗ್ಗೆ ನವಜೀವನ ತಂಡದ 9 ಸಿಬ್ಬಂದಿ ವರ್ಗದವರಿಗೆ ತರಬೇತಿಯನ್ನು ನೀಡಿದರು.

## “ವಿಶೇಷ ವಿಕಲ ಚೇತನರ ಸಭೆ”



ಅಕ್ಟೋಬರ 04. 2023 ರಂದು ಚಿತಗುಪ್ಪಾ ತಾಲ್ಲೂಕಿನ ಬಾಳೋಬಾ ಓಣಿಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜೀ ಪೌಂಡೇಶನ ಸಂಯುಕ್ತ ಆಶ್ರಯದಲಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಹಣಮಂತ ರವರು ಶ್ರೀಮತಿ ಶುಭದ್ರ ರವರ ಮನೆಯಲ್ಲಿ ವಿಶೇಷ ವಿಕಲ ಚೇತನರ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಸರಕಾರದ ಸೌಲಭ್ಯಗಳ ಕುರಿತು ಮಾಹಿತಿ ನೀಡಿ ಯು.ಡಿ.ಐ.ಡಿ ಕಾರ್ಡ್ ಮಾಡಿಸಿಕೊಡಲು ತಿಳಿಸಲಾಯಿತು. ಈ ಸಭೆಯಲ್ಲಿ ಮಾನಸಿಕ ಅಸ್ವಸ್ಥರು, ಅಂಗವಿಕಲರು ಹಾಗೂ ವಿಶೇಷ ವಿಕಲ ಚೇತನರು ಸೇರಿ ಒಟ್ಟು 08 ಜನರು ಭಾಗವಹಿಸಿದರು. ಯು.ಡಿ.ಐ.ಡಿ ಕಾರ್ಡ್ ಮಾಡಿಸಿಕೊಳ್ಳಲು ಮೂಂದಾದರು.

## “ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ”



ಅಕ್ಟೋಬರ 03. 2023 ರಂದು ಹುಮನಾಬಾದ ತಾಲ್ಲೂಕಿನ ಶಿವಪೂರ ಗಲ್ಲಿಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜೀ ಪೌಂಡೇಶನ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ತರಬೇತಿ ನೋಡಲಾಯಿತ್ತು. ಶ್ರೀಮತಿ ಮಹಾದೇವಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತರು ಮಾನಸಿಕ ಅಸ್ವಸ್ಥರು ಅಂದರೇನು, ಮಾನಸಿಕ ಅಸ್ವಸ್ಥತೆ ಕಾರಣಗಳೇನು ಹಾಗೂ ಮಾನಸಿಕ ಅಸ್ವಸ್ಥರ ಗುಣಲಕ್ಷಣಗಳ ಬಗ್ಗೆ ಮಾಹಿತಿ ನೀಡಿದರು. ಮಾನಸಿಕ ಅಸ್ವಸ್ಥರಿಗೆ ಸರಕಾರಿ ಆಸ್ಪತ್ರೆಯಲ್ಲಿ ಪ್ರತಿ ಬುಧುವಾರ ಡಿ.ಎಮ್.ಎಚ್.ಪಿ ಕ್ಯಾಂಪ್ ಇರುತ್ತದೆ ಉಚಿತವಾಗಿ ಮಾತ್ರೆಗಳು ಕೋಡಲಾಗುವುದು. ದಿನಪ್ರತಿ ಮಾತ್ರೆಗಳು ಸೇವಿಸುವುದರಿಂದ ಮಾನಸಿಕ ಕಾಯಿಲೆ ಕಡಿಮೆ ಆಗುವದು ಎಂದು ತಿಳಿಸಿದರು. ಈ ತರಬೇತಿಯಲ್ಲಿ 15 ಜನರು ಭಾಗವಹಿಸಿದರು.

ಅಕ್ಟೋಬರ್ 17ರಂದು ಬಸವಕಲ್ಯಾಣ ನಗರದ ಜ್ಞಾನಪ್ರೀಯಾ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮದ ಸಿಬ್ಬಂದಿ ವರ್ಗದವರು **"ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ"** ಕಾರ್ಯಕ್ರಮವು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ನವಜೀವನ (ಎಲ್ಎಲ್ಎಲ್ಎಫ್) ಕಾರ್ಯಕ್ರಮದ ಸಂಯೋಜಕರಾದ ಶ್ರೀ ಆನಂದರವರು ಮಾತನಾಡುತ್ತ, "ಮಾನಸಿಕ ಅಸ್ವಸ್ಥರೆಂದರೆನು?, ಅದರ ಲಕ್ಷಣಗಳು ಹಾಗೂ ಈ ಕಾಯಿಲೆ ಹೇಗೆ ಬರುತ್ತದೆ ಮತ್ತು ಇದಕ್ಕೆ ಚಿಕಿತ್ಸೆ ಸಹ ಇದೆ ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 31 ಜನರು ಭಾಗವಹಿಸಿದರು.



## ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಕಾರ್ಯ



ಭಾರತ ವೈಭವ

Page (3)
22 Oct 2023

POWERED BY KHUSHI HOST

# ನಿರ್ಣಾದಲ್ಲಿ ಮಾನಸಿಕ ಆರೋಗ್ಯ ದಿನಾಚರಣೆ

ಚಿಟಗುಪ್ಪ: ತಾಲೂಕಿನ ನಿರ್ಣಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹುಮನಾಬಾದ



ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ದಿನಾಂಕ 21-10-2023 ಶನಿವಾರ ಮಾನಸಿಕ ಆರೋಗ್ಯ ದಿನಾಚರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸಂತ ಲಾರೆನ್ಸ್ ಚರ್ಚಿನ ಸಹ ನಿರ್ದೇಶಕರಾದ ಫಾದರ್ ಅವಿನಾಶ ಮಾತನಾಡಿ.ಆರ್ಬಿಟ್ ಸಂಸ್ಥೆ ಮಾಡುವ ಸಮಾಜ ಸೇವೆ ಮತ್ತು ಮಾನಸಿಕ ಆರೋಗ್ಯ ದಿನಾಚರಣೆಯ ಮುಖ್ಯ ಉದ್ದೇಶದ ಬಗ್ಗೆ ತಿಳಿಸಿದರು.ಕಾರ್ಯಕ್ರಮದ ಮುಖ್ಯ ಅತಿಥಿ ಗ್ರಾಮ ಪಂಚಾಯತ ಉಪಾಧ್ಯಕ್ಷರಾದ ಸಂಜೀವ್ ಕಿರಣ್ ಮಾತನಾಡಿ.ಮಾನಸಿಕ ರೋಗವು ಒಂದು ಮೆದುಳಿನ ಕಾಯಿಲೆಯಾಗಿದೆ.ಈ ಕಾಯಿಲೆಗೆ ಭಯಪಡುವ ಅವಶ್ಯಕತೆ ಇಲ್ಲ.ಸೂಕ್ತ ಸಮಯದಲ್ಲಿ ಚಿಕಿತ್ಸೆ ಪಡೆಯುವುದರಿಂದ ರೋಗದಿಂದ ಹೊರಬರಬಹುದು ಎಂದು ಹೇಳಿದರು.ಬಳಿಕ ಕಾರ್ಯಕ್ರಮದ ಅಧ್ಯಕ್ಷರು ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಹೈದರ್ ಖಾನ್ ಪಟೇಲ್ ಮಾತಾಡಿ.ಆರ್ಬಿಟ್ ಸಂಸ್ಥೆ ಮಾಡುವ ಸೇವೆ ಅತ್ಯಂತ ಅಮೋಘವಾಗಿದೆ.ಸರ್ಕಾರಿ ಆಸ್ಪತ್ರೆಯಲ್ಲಿ ನಡೆಯುವ ಡಿಎಂಎಚ್ಪಿ ಕ್ಯಾಂಪಿನಿಂದ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕು.ಸಮಾಜ ಮುಖಿ ಆರ್ಬಿಟ್ ಸಂಸ್ಥೆ ಮಾಡುವ ಕೆಲಸ ಕಾರ್ಯಕ್ಕೆ ಸದಾ ಸಹಕಾರಿಯಾಗಿರುತ್ತೇನೆ ಎಂದು ಭರವಸೆ ವ್ಯಕ್ತಪಡಿಸಿದರು.ಈ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆ ಸಿಬ್ಬಂದಿ ವರ್ಗದವರು,ನಿರ್ಣಾ ವಲಯ ಮಟ್ಟದ ಆಶಾ ಕಾರ್ಯಕರ್ತರು,ಆಸ್ಪತ್ರೆ ಸಿಬ್ಬಂದಿ ವರ್ಗದವರು ಸೇರಿ ಅನೇಕರು ಭಾಗವಹಿಸಿದ್ದರು.ನಿರೂಪಣೆ ಮತ್ತು ಸ್ವಾಗತ ಶ್ರೀಮತಿ ರೀಟಾ.ಪ್ರಾಸ್ತವಿಕ ನುಡಿ ಅರುಣ್ ಕುಮಾರ್ ಮತ್ತು ವಂದನಾರ್ಪಣೆ ಶ್ರೀಮತಿ ಮಹಾದೇವಿಯವರು ನಡೆಸಿಕೊಟ್ಟರು.



ಉದಯಕಾಲ

ಕನ್ನಡಿಗರ ಜೀವಾಳ

ಅಂಗನವಾಡಿ ಕಾರ್ಯಕರ್ತೆಯರಿಗೆ ಆಪ್ತ ಸಮಾಲೋಚನಾ ತರಬೇತಿ

## ಆರ್ಬಿಟ್ ಹಾಗೂ ಅಜೀಂ ಪ್ರೇಂಜಿ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಮಾನಸಿಕ ಆರೋಗ್ಯ ದಿನಾಚರಣೆ ಆಚರಣೆ




ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ ಅ.19: ಇಂದು ಹುಮ್ನಾಬಾದ್ ತಾಲೂಕಿನ ಜಲಸಿಂಗಿ ಗ್ರಾಮದಲ್ಲಿ ಆರ್ಬಿಟ್ ಹಾಗೂ ಅಜೀಂ ಪ್ರೇಂಜಿ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಮಾನಸಿಕ ಆರೋಗ್ಯ ದಿನಾಚರಣೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಅವರು ಮಾತನಾಡುತ್ತಾ ಆರ್ಬಿಟ್ ಸಂಸ್ಥೆಯು ಮಾಡುವ ಸಮಾಜ ಸೇವೆ ಕುರಿತು ಜನರಿಗೆ ತಿಳಿಸಿದರು, ಮತ್ತು ಮಾನಸಿಕ ಆರೋಗ್ಯ ದಿನಾಚರಣೆ ಮುಖ್ಯ ಉದ್ದೇಶ ಜನರಿಗೆ ಈ ರೋಗದ ಕುರಿತು ಜಾಗೃತಿ ಮೂಡಿಸುವುದು ಎಂದು ಹತಿಳಿಸಿದರು. ಹಾಗೂ ಜಲಸಿಗಿ ಕೇಂದ್ರದ ಸಹ ನಿರ್ದೇಶಕರಾದ ಒಂದನೆಯ ಫಾದರ್ ಸಚಿನ್ ರವರು ಆರ್ಬಿಟ್ ಸಂಸ್ಥೆಯು 30 ವರ್ಷಗಳಿಂದ ಸಮಾಜಸೇವೆ ಮಾಡುತ್ತಾ ಇತ್ತೀಚೆಗೆ ಕಳೆದ ನಾಲ್ಕು ವರ್ಷಗಳಿಂದ ಮಾನಸಿಕರ ಜೊತೆ ಕೆಲಸ ಮಾಡುತ್ತಿದೆ ಹಾಗೂ ಮಾನಸಿಕ ಅಸ್ವಸ್ಥರು ಪುನರ್ ವಸತಿಗೆ ಸೇರಬೇಕಾದ ನಾವು ನೀವೆಲ್ಲರೂ ಒಟ್ಟಾಗಿ ಸಮಾಜ ಸೇವೆ ಮಾಡಿದರೆ ಮಾತ್ರ ಸಾಧ್ಯ ಎಂದು ಜನರಲ್ಲಿ ಹುರಿದುಂಬಿಸಿದರು.

ಕಾರ್ಯಕ್ರಮದಲ್ಲಿ ನವಜೀವನ ಕಾರ್ಯಕ್ರಮದ ಸಂಯೋಜಕರಾದ ಪ್ರವೀಣ್ ಅವರು ಮಾನಸಿಕ ಅಸ್ವಸ್ಥರಿಗೆ ಉಚಿತ ಚಿಕಿತ್ಸೆ ಇದೆ ಎಂದು ಹೇಳುತ್ತಾ ಹುಮ್ನಾಬಾದ್ ಹಾಗೂ ಚಿಟ್ಗುಪ್ಪ ತಾಲೂಕಿನಲ್ಲಿ ನಡೆಯುವ ಆಬಊಕ ಶಿಬಿರದ ಸ್ಥಳ ಮತ್ತು ಸಮಯವನ್ನು ತಿಳಿಸಿದರು. ಒಟ್ಟು ಈ ಕಾರ್ಯಕ್ರಮದಲ್ಲಿ ಅತಿಥಿ ಗಣ್ಯರು ಹಾಗೂ ಗ್ರಾಮಸ್ಥರು ಸೇರಿ 55 ಜನ ಭಾಗವಹಿಸಿದರು ಬಂದಂತ ಶಿಬಿರಾರ್ಥಿಗಳಿಗೆ ಸಂಯೋಜಕರಾದ ಪ್ರವೀಣ್ ಅವರು ಸ್ವಾಗತಿಸಿದರು ರವಿಯವರು ಕಾರ್ಯನಿರ್ವಹಣೆ ಮಾಡುವುದರ ಜೊತೆಗೆ ಮಹದೇವಿಯವರ ಹಾಜರಿದ್ದರು.

## ಕುಮಾರ ಚಿಂಚೋಳಿ ಆರ್ಬಿಟ್ ಸಂಸ್ಥೆಯ ವತಿಯಿಂದ ಮಾನಸಿಕ ಆರೋಗ್ಯ ದಿನಾಚರಣೆ



## ಆಘಾಡಿ ದಿನ ಪತ್ರಿಕೆ ವಂಚಿತರ ಧ್ವನಿ..

### ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ



## ವೀಶ್ವ ಅಸ್ವಸ್ಥ ಆರೋಗ್ಯ ದಿನಾಚರಣೆ




## ಆರ್ಬಿಟ್: ವಿಶ್ವ ಮಾನಸಿಕ ಅಸ್ವಸ್ಥರ ದಿನಾಚರಣೆ



## ಮಾನಸಿಕ ಅಸ್ವಸ್ಥರ ದಿನಾಚರಣೆ



# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕರ ಶಿಕ್ಷಣ



ಅಕ್ಟೋಬರ 25 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ವತಿಯಿಂದ ಉದನೂರ ಗ್ರಾಮ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಮಾಹಿತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಒಂದು ಕಾರ್ಯಕ್ರಮದಲ್ಲಿ ಮಕ್ಕಳು ಹಾಗೂ ಪಾಲಕರು ಉಪಸ್ಥಿತರಿದ್ದರು. 0–6 ವರ್ಷದೊಳಗಿನ ಮಕ್ಕಳ ಬೆಳವಣಿಗೆ ಕುಂಠಿತ ವಿರುವ ಮಕ್ಕಳನ್ನು ಗುರುತಿಸಿ ಆ ಮಕ್ಕಳನ್ನು ವಿಶ್ಲೇಷಣೆ ಮಾಡಿ ಆ ಮಕ್ಕಳಿಗೆ ಅವಶ್ಯಕತೆ ಇರುವ ಸಾಧನ ಸಲಕರಣೆ ನೀಡಿ ಹಾಗೂ ಮಕ್ಕಳಿಗೆ ಚಟುವಟಿಕೆ ನೀಡುವುದರ ಮೂಲಕ ಆ ಮಕ್ಕಳಲ್ಲಿ ನ್ಯೂನತೆಯನ್ನು ಸ್ವಲ್ಪ ಮಟ್ಟಿಗೆ ಸುಧಾರಣೆ ತರುವ ಕೆಲಸದಲ್ಲಿ ನಮ್ಮ ಸೇವಾ ಸಂಗಮ ಸಂಸ್ಥೆ ತೊಡಗಿದೆ ಎಂದು ಹೇಳಬಹುದು. ಹಾಗೂ ವಿಕಲ ಚೇತನರಿಗಿರುವ ಸರ್ಕಾರಿ ಸೌಲಭ್ಯ ಕುರಿತು ಮಾಹಿತಿ ನೀಡಲಾಯಿತು. 5% ಅನುದಾನ, ಉ,ಡಿ,ಐ,ಡಿ ಕಾರ್ಯ ಪಿಂಚಣಿ ವೇತನ ಇದರ ಉಪಯೋಗ ಪಡೆದುಕೊಳ್ಳಿ ಎಂದು ತಿಳಿಸಲಾಯಿತು.

## "ಉತ್ತಮ ಸಮಾಜಕ್ಕಾಗಿ ಪ್ರಾಮಾಣಿಕ ಸೇವೆ"

17 ಸೆಪ್ಟೆಂಬರ್ ಕಲಬುರಗಿ ತಾಲ್ಲೂಕಿನ ಕೋಟನೂರ (ಡಿ) ಗ್ರಾಮದ ಸೇವಾ ಸಂಗಮ ಸಂಸ್ಥೆಯಲ್ಲಿ ಅಜೀಂ ಪ್ರೇಮಜಿ ಪೌಂಡೇಷನ್ ಸಹಯೋಗದಲ್ಲಿ ಬೆಳವಣಿಗೆ ಕುಂಡಿತ ಮಕ್ಕಳ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಅಂಗನವಾಡಿ ಕಾರ್ಯಕರ್ತೆಯರು ಗ್ರಾಮೀಣ ಪುನರ್ ವಸತಿ ಕಾರ್ಯಕರ್ತರು ಹಾಗೂ ಗ್ರಾಮ ಪಂಚಾಯತಿ ಸದಸ್ಯರಿಗೆ ತರಬೇತಿ ಕಾರ್ಯಗಾರ ಹಮ್ಮಿಕೊಳ್ಳಲಾಯಿತು. ಬೆಳವಣಿಗೆ ಕುಂಠಿತ ಮಕ್ಕಳ ಶೀಘ್ರಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು 0–6 ವರ್ಷದ ಮಕ್ಕಳು ಯಾರು ಬೇಳವಣಿಗೆಯಲ್ಲಿ ಕುಂಠಿತ ಹೊಂದಿರುವಂತಹ ಮಕ್ಕಳಿಗೆ ವಿಶ್ಲೇಷಣೆ ಮಾಡಿ ಯಾವುದರಲ್ಲಿ ಬೆಳವಣಿಗೆ ಕುಂಠಿತ ಹೊಂದಿದೆ ಎಂದು ತಿಳಿದುಕೊಂಡು ಅದಕ್ಕೆ ಉತ್ತಜಕ ತರಬೇತಿ ಪಾಲಕರಿಗೆ ನೀಡುವುದರ ಜೊತೆಗೆ/ ಸೇವೆ ಎಂಬ ಭಾವನೆಯಿಂದ ಕಾರ್ಯಗಾರ ತರಬೇತಿಯನ್ನು ನೀಡಲಾಗಿದೆ. ಮಕ್ಕಳು ಬೆಳವಣಿಗೆಗೆ 8 ಹಂತದಲ್ಲಿ 14 ಭಾಗಗಳಲ್ಲಿ ಇದ್ದಾರೆಂದು ಗುರುತಿಸಿ ಮಕ್ಕಳ ಪಾಲಕರಿಗೆ ತರಬೇತಿ ನೀಡಿ ಉತ್ತೇಜಕ ಚಟುವಟಿಕೆ ನೀಡುವುದರ ಮೂಲಕ ಕುಂಠಿತವನ್ನು ಕಡಿಮೆ ಮಾಡುವುದೆಂದು ಸಂಪನ್ಮೂಲ ವ್ಯಕ್ತಿಯಾದ ಸದಾನಂದ ವ್ಯಕ್ತಪಡಿಸಿದರು.





## ಬೇಳವಣಿಗೆಯಲ್ಲಿ ಕುಂಠಿತಗೊಂಡ ಮಕ್ಕಳಿಗೆ ವಿಶ್ಲೇಷಣೆ ಮಾಡುಲಾಯಿತು

ಕಲಬುರಗಿ ತಾಲ್ಲೂಕಿನಲ್ಲಿ ಬರುವ ಫರಹತಬಾದ ಮತ್ತು ಹಾಗರಗುಂಡಗಿ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆ ಹಾಗು ಅಜೀಂ ಪ್ರೇಮಜಿ ಪೌಂಢೇಶನ, ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದಡಿಯಲ್ಲಿ  ಬೇಳವಣಿಗೆಯಲ್ಲಿ ಕುಂಠಿತಗೊಂಡಿರುವ ಮಕ್ಕಳಿಗಕೆ "ವಿಶ್ಲೇಷಣೆ ಮತ್ತು ಪುನರ ವಿಶ್ಲೇಷಣೆ  ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ವಿಶ್ಲೇಷಕರಾಗಿ ಶ್ರೀಮತಿ ನೇತ್ರಾ ಸಕ್ಯ ಪೌಂಢೇಶನ ಬೆಂಗಳುರು ಇವರು ಒಟು05 ಮಕ್ಕಳಿಗೆ ಚಟುವಟಿಕೆಯ ಮೂಲಕ ವಿಶ್ಲೇಷಣೆಯನ್ನು ಮಾಡಿದರು, ಇದರಲ್ಲಿ ಎರಡು ಮಕ್ಕಳಿಗೆ ವಿಶ್ಲೇಷಣೆ ಮಾಡಿದರೆ ಮೂರು ಮಕ್ಕಳಿಗೆ ಪುನರ ವಿಶ್ಲೇಷಣೆಯನ್ನು ಮಾಡಿದರು, ರಾಜಕುಮಾರ ದೇವರಮನಿ ಇವರು ಸೇವಾಸಂಗಮ ಸಂಸ್ಥೆಯಾ ಪರಿಚಯವನ್ನು ಹಾಗೂ ಸರಕಾರದಿಂದ ಲಭ್ಯವಿರು ಸೌಲಭ್ಯಗಳ ಕುರಿತು ಮಾಹಿತಿಯನ್ನು ನೀಡಿದರು, ಈ ಕಾರ್ಯಕ್ರಮದಲ್ಲಿ ಮಕ್ಕಳು, ಪಾಲಕರು, ಪೋಷಕರು ಭಾಗವಹಿಸಿದರು,



## "ಸಮಾಜ ಕಾರ್ಯಕರ್ತರು ಸಮಾಜವನ್ನು ಬೇಳಗುವ ದೀಪವಾಗಿದ್ದಾರೆ"



"ಸಮಾಜ ಸೇವೆಯನ್ನು ಮಾಡುತ್ತಿರು ಪ್ರತಿಯೊಬ್ಬರು ಪ್ರಮಾಣಿಕತೆಯಿಂದ ಸೇವೆಯನ್ನು ಸಲ್ಲಿಸಿದ್ದರೆ ಶಾಸ್ವತವಾಗಿ ಸಮಾಜವನ್ನು ಉತ್ತಮ ಸಮಾಜವನ್ನಾಗಿ ಪರಿವರ್ತಿಸಬಹುದು, ಒಂದು ದೀಪದಿಂದ ಹಲವು ದೀಪಗಳನ್ನು ಹಚ್ಚಬಹುದು ಹಾಗೆ ಒಬ್ಬ ಸಮಾಜ ಕಾರ್ಯಕರ್ತ ಹಲವು ಜನರ ಜೀವನದಲ್ಲಿ ಹೊಸ ಬೇಳಕನ್ನು ತರಬಹುದಾಗಿದೆ ಆದ್ದರಿಂದ ನೀವು ಎಲ್ಲರು ಸಮಾಜವನ್ನು ಬೇಳಗುವ ದೀಪವಾಗಬೇಕು" ಎಂದ ಫಾದರ ಸ್ಟಿವನ್ ವೇಗಸ್ ಕಾರ್ಯದರ್ಶಿಗಳು, ಡಯಾಸಿಸ್ ಶಿಕ್ಷಣ ಸಂಸ್ಥೆ, ಕಲಬುರಗಿ ಉದ್ದೇಶಿಸಿದರು. ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಷನ್ ಇವರ ಸಂಯುಕ್ತ ಆಶ್ರಯದಲ್ಲಿ ಬೆಳವಣಿಗೆ ಕುಂಠಿತವಿರುವ ಮಕ್ಕಳ ಶೀಘ್ರ ಪತ್ತೆ ಹಚ್ಚುವಿಗೆ ಮತ್ತು ಆರಂಭಿಕ ಶಿಕ್ಷಣ ಕುರಿತು ಒಂದು ದಿನದ ತರಬೇತಿ ಕಾರ್ಯಗಾರವನ್ನು ಅಂಗನವಾಡಿ ಕಾರ್ಯಕರ್ತೆಯರಿಗೆ, ಗ್ರಾಮೀಣ ಪುನರ ವಸತಿ ಕಾರ್ಯಕರ್ತರು ಹಾಗೂ ಗ್ರಾಮಪಂಚಾಯತ ಸದಸ್ಯರಿಗೆ ಹಮ್ಮಿಕೊಳ್ಳಲಾಯಿತ್ತು. ಶ್ರೀಮತಿ ಸೀಮಾ ರಾಠೋಡ ಅಂಗನವಾಡಿ ಮೇಲ್ವಿಚಾರಕಿಯವರು ಫರಹತಬಾದ ವಲಯ, ಕಲಬುರಗಿ, ಶ್ರೀ ಕಾಸಿಂ ಜಿಲ್ಲಾ ಸಂಯೋಜಕರು ವಿ.ಆರ್.ಡಬ್ಲ್ಯು, ಕಲಬುರಗಿ, ಹಾಗೂ ಶ್ರೀ ಸದಾನಂದ ಸಂಪನ್ಮೂಲ ವ್ಯಕ್ತಿಗಳು, ಇವರು ವೇಧಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಶ್ರೀ ರಾಜಕುಮಾರ, ಶ್ರೀಮತಿ ಕವಿತಾ, ಲಕ್ಷ್ಮಿ, ಶ್ರೀಮತಿ ಜಗದೇವಿ ಇಬ ತಂಡದವರು, ಅಂಗನವಾಡಿ ಕಾರ್ಯಕರ್ತೆಯರು, ಹಾಗೂ ಗ್ರಾಮೀಣ ಪುನರವಸತಿ ಕಾರ್ಯಕರ್ತರು, ಸುಮಾರು 60 ಜನ ಕಾರ್ಯಕರ್ತರು ಭಾಗವಹಿಸಿದರು

## "ಓ ನನ್ನ ಚೇತನ ಆಗು ನೀ ಅನಿಕೇತನ"





ಕಲಬರುಗಿ ತಾಲೂಕಿನ ಫರಹತಬಾದ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ "ಚೇತನ ಕೇಂದ್ರದ ಉದ್ಘಾಟನಾ ಕಾರ್ಯಕ್ರಮವನ್ನು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿತು. ಡಾ. ಸಂತೋಷ ಪಾಟೀಲ್ ಆಡಳಿತ ವೈದ್ಯಧಿಕಾರಿಗಳು ಪ್ರಾಥಮಿಕ ಆರೊಗ್ಯ ಕೇಂದ್ರ ಫರಹತಬಾದ, ಇವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ ಸೇವಾಸಂಗಮ ಸಂಸ್ಥೆಯು ಬೆಳವಣಿಗೆಯಲ್ಲಿ ಕುಂಠಿತವಾಗಿರುವ ಮಕ್ಕಳನ್ನು ಗುರುತಿಸಿ ಪಾಲಕರಿಗೆ ಮನವರಿಕೆ ಮಾಡುವ ಮೂಲಕ ಆ ಮಕ್ಕಳ ನ್ಯೂನತೆಗೆ ತಕ್ಕಂತೆ ಉತ್ತೇಜಕ ಚಟುವಟಿಕೆಯನ್ನು ಮಕ್ಕಳ ಮನೆಗೆ ತೇರಳಿ ನೀಡುತ್ತಿರುವುದು ಮತ್ತು ಅವರಿಗೆ ಹತ್ತಿರ ವಾಗುವುದಕ್ಕೆ ಪ್ರಾಥಮಿಕ ಆರೊಗ್ಯ ಕೇಂದ್ರ ಫರಹತಬಾದನಲ್ಲಿ ತಮ್ಮ ಸಬ್ ಕೇಂದ್ರವಾದ ಚೇತನ ಕೇಂದ್ರವನ್ನು ಪ್ರಾರಂಭಿಸಿರುವುದು ಜನರ ಸೇವೆಯಲ್ಲಿ ಅವರಿಗಿರುವ ಕಾಳಜಿಯನ್ನು ನಾವು ನೋಡಬಹುದಾಗಿದೆ, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳಿಗೆ ಈ ಸೇವೆಯನ್ನು ತಲುಪಲು ಇದು ಸಹಾಯವಾಗಲಿ ಎಂದರು. ಶ್ರೀ ಮಹಾದೇವಪ್ಪಾ ಜಿಲ್ಲಾ ಸಂಯೋಜಕರು ಅಜೀಂ ಪ್ರೇಮ್‌ಜಿ ಫೌಂಡೇಶನ ಚೇತನ ಕೇಂದ್ರದ ಪ್ರಾರಂಭದಿಂದ ಬೆಳವಣಿಗೆಯಲ್ಲಿ ಕುಂಠಿತಗೊಂಡಿರುವ ಮಕ್ಕಳಲ್ಲಿ ನವಚೇತನ ತುಂಬುವಲ್ಲಿ ಈ ಕೇಂದ್ರ ಯಶಸ್ವಿಯಾಗಲಿ ಎಂದು ಹಾರೈಸಿದರು. ಕಾರ್ಯಕ್ರಮದಲ್ಲಿ ಗ್ರಾಮಪಂಚಾಯತ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಪ್ರೇಮ ದೊಡ್ಡಮನಿ, ಗ್ರಾಮಪಂಚಾಯತ ಉಪಾಧ್ಯಕ್ಷರಾದ ಶ್ರೀ ಯಲ್ಲಾಪ್ಪ, ಗ್ರಾಮಪಂಚಾಯತ ಸದಸ್ಯರು, ಶ್ರೀಮತಿ ಕವಿತಾ ಪ್ರಾಥಮಿಕ ಆರೋಗ್ಯ ಕೇಂದ್ರ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಪಾಲಕರು, ಪೋಷಕರು, ಹಾಗೂ ಮಕ್ಕಳು ಭಾಗವಹಿಸಿದರು







ಅಕ್ಟೊಂಬರ 30 ರಂದು ಕಲಬುರಗಿ ನಗರದ ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಹೊನ್ನಕಿರಣಗಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ **"ಚೇತನ ಪುನರವಸತಿ ಕೇಂದ್ರದ"** ಉದ್ಘಾಟನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಶ್ರೀಮತಿ ಗೀತಾ ಹರಬಲ್ ಪ್ರಾಥಮಿಕ ಆರೋಗ್ಯ ಕೇಂದ್ರ ಹೊನ್ನಕಿರಣಗಿ, ಕವಿತಾ ಕಾಗೆ ಪಿ,ಡಿ,ಓ & ಮಲ್ಲಿನಾಥ ಬೂಸಾ ಗ್ರಾಮ ಪಂಚಾಯತ ಅಧ್ಯಕ್ಷರು ಅವರು ರಿಬನ್ ಕತ್ತರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಾ, ಶ್ರೀಮತಿ ಗೀತಾ ಹರಬಲ ವೈದ್ಯಾಧಿಕಾರಿಗಳು ಇಂತಹ ಸಂಘ ಸಂಸ್ಥೆಗಳಿವೆ ಅದರಲ್ಲೂ ಸೇವಾ ಸಂಗಮ ಸಂಸ್ಥೆ ಸಮಾಜದಲ್ಲಿ ತುಂಬಾ ಒಳ್ಳೆಯ ಕಾರ್ಯಗಳನ್ನು ಮಾಡುತ್ತಿದೆ ಎಂದು ತಿಳಿಸಿದರು. ನಿರ್ದೇಶಕರು ಫಾ. ವಿಕ್ಟರ ವಾಸ್ ಸೇವಾ ಸಂಗಮ ಸಂಸ್ಥೆಯು ಕಲಬುರಗಿ ಜಿಲ್ಲೆಯಲ್ಲಿ ಸುಮಾರು 17 ವರ್ಷದಿಂದ ಕಾರ್ಯನಿರ್ವಹಿಸುತ್ತಿದೆ, ಬೆಳವಣಿಗೆ ಕುಂಠಿತಗೊಂಡಿರುವ ಮಕ್ಕಳಿಗೊಸ್ಕರ ನಮ್ಮ ಅಜೀಮ್ ಪ್ರೇಮ್‌ಜೀ ಫೌಂಡೇಶನ ಅವರು ಸರಕಾರ ನೀಡುತ್ತದೆ ಎಂದು ತಿಳಿಸಿದರು.




## ಮಕ್ಕಳ ನ್ಯೂನತೆ ಹೊಗಲಾಡಿಸುವ ಕುರಿತು ಚಟುವಟಿಗೆ



ಅಕ್ಟೋಬರ 26 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜೀ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ಶೀಘ್ರಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದಡಿಯಲ್ಲಿ ಚನ್ನವೀರನಗರ 12 ಜನ ಮಹಿಳೆಯರಿಗೆ 6 ವರ್ಷದ ಒಳಗಿನ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಬಗ್ಗೆ ನಾಗರಾಜ ಅವರು ಮಹಿಳೆಯರಿಗೆ ಹಂತಹಂತವಾಗಿ ವಿವರಿಸಿದ್ದರು ಇಂತಹ ಮಕ್ಕಳು ನಿಮ್ಮ ಏರಿಯಾ ಅಥವಾ ನಿಮ್ಮ ಅಕ್ಕ ಪಕ್ಕ ಕಂಡುಬಂದರೆ ನಮ್ಮಗೆ ತಿಳಿಸಿ ಎಂದು ಹೇಳಲಾಯಿತ್ತು. ಮತ್ತು ಮಕ್ಕಳಿಗೆ ಸಂಪೊಟದಿಂದ ಕುಳಿತುಕೋಳ್ಳುವ ಚಟುವಟಿಕೆ ಹಾಗೂ ಕಲರ್ ಮ್ಯಾಚಿಂಗ ಮಾಡುವುದರಿಂದ ಮಕ್ಕಳ ಕಲರ್ ಕಾನ್ಸೆಪ್ಟ್ ಮಾಡುವುದು ಹಾಗೂ ಮನೆಯಲ್ಲಿ ಇರುವಂತ ಸಾಮಾಗ್ರಿಗಳನ್ನು ಬಳಸಿಕೊಂಡು ಮಕ್ಕಳ ನೂನ್ಯತೆಗಳನ್ನು ಕಡಿಮೆ ಮಾಡಬಹುದು. ಈ ಒಂದು ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯಾದ ಕಾವೇರಿ ಬಿರದಾರ ಉಪಸ್ಥಿತರಿದರು.

## “ಮನೆಯೆ ಮೊದಲ ಪಾಠ ಶಾಲೆ ಹೆತ್ತ ತಾಯಿಯೆ ಮೊದಲ ಗುರು”



ಕಲಬುರಗಿ ತಾಲ್ಲೂಕಿನ ಫರಹತಬಾದ ಗ್ರಾಮದಲ್ಲಿ ಕಲಿಕಾ ಸಾಮಗ್ರಿಗಳ ಕುರಿತು ಪಾಲಕರಿಗೆ ಒಂದು ದಿನದ ತರಬೇತಿ ಕಾಯಕ್ರಮವನ್ನು ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜಿ ಫೌಂಢೇಶನ, ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಯಿತು. ತರಬೇತಿಯಗೆ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಮತಿ ನೇತ್ರಾ ಸಕ್ಯಾ ಸಂಸ್ಥೆ ಬೆಂಗಳೂರು, ಇವರು ಕಾರ್ಯಕ್ರಮದಲ್ಲಿ ಪಾಲಕರಿಗೆ ತಮ್ಮ ಮಕ್ಕಳಲ್ಲಿರುವ ಬೆಳವಣಿಗೆಯ ಕುಂಠಿತ ನ್ಯುನತೆಯಿಂದ ಬಳಲುತಿರುವ ತಮ್ಮ ಮಕ್ಕಳಿಗೆ ಮನೆಯಲ್ಲಿರುವ ಸಾಮಗ್ರಿಗಳನ್ನು/ವಸ್ತುಗಳನ್ನು ಬಳಸಿಕೊಂಡು ಹೇಗೆ ಉತ್ತೇಜಕ ಚಟುವಟಿಕೆಗಳನ್ನು ಮಾಡಬಹುದು, ನಾವು ಮಾಡುವ ಚಟುವಟಿಕೆಯ ಮೂಲಕ ಮಕ್ಕಳಲ್ಲಿ ಬೌಧಿಕ, ದೈಹಿಕ, ಮಾನಸಿಕ ಸದೃಢತೆಯನ್ನು ಬರುವಂತೆ ಇಂತಹ ಚಟುವಟಿಕೆಗಳನ್ನು ಮಾಡಬಹುದು ಅದು ನಮ್ಮ ಮನೆಯಲ್ಲಿರುವ ಅಥವಾ ನಮ್ಮ ಅಕ್ಕ-ಪಕ್ಕದಲ್ಲಿ ಲಭ್ಯವಿರುವ ಸಾಮಾಗ್ರಿಗಳನ್ನು ಬಳಸಿಕೊಂಡು ಉದಾ: ಟಮಾಟೊ ಬಳಿಸಿಕೊಂಡು ಮಗುವಿಗೆ ಪಂಚೇಂದ್ರಿಯವನ್ನು ಜಾಗೃತ ಗೊಳಿಸಬಹುದು ಹಾಗೂ ಮಗುವಿನ ಕಿವಿಯಲ್ಲಿ ಬಣ್ಣ, ಹೆಸರು ಹೇಳುವುದರಿಂದ ಮೊದಲ ಬಾರಿ ಹೊಸ ರೀತಿಯಾ ಶಬ್ದವ್ನ ಕೇಳಿದಂತೆ ಆಗುತ್ತದೆ . ಇಂತಹ ಹತ್ತು – ಹಲವು ಸಾಮಾಗ್ರಿಗಳನ್ನು ಬಳಸಿಕೊಂಡು ತಮ್ಮ ಮಕ್ಕಳಿಗೆ ಇವರುವ ನ್ಯುನತೆಯಿಂದ ಮುಕ್ತಗೊಳಿಸಬಹುದಾಗಿದೆ ಯಾವುದೇ ದುಡ್ಡಿನ ಖರ್ಚು-ವೇಚ್ಚವಿಲ್ಲದೆ ಇದನ್ನು ತಾವು ಮಾಡಬಹುದಾಗಿದೆ ಎಂಬುವುದರ ಬಗ್ಗೆ ಮಾಹಿತಿಯನ್ನು ನೀಡಿದರು. . ಕಾರ್ಯಕ್ರಮದಲ್ಲಿ ಕಲಬುರಗಿ ತಾಲ್ಲೂಕಿನ ಫರಹತಬಾದ ಪ್ರಾಥಮಿಕ ಕೇಂದ್ರದ ವ್ಯಪ್ತಿಗೆ ಬರುವ ಗ್ರಾಮಗಳಿಂದ ಪಾಲಕರು ಪೋಷಕರು ಸೇವಾ ಸಂಗಮ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಶ್ರೀ ರಾಜಕುಮಾರ, ಶಿವಕಾಂತ, ಅನಿತಾ, ಜಗದೇವಿ, ಲಕ್ಷ್ಮಿ, ಕವಿತಾ ಹಾಗೂ ನಾಗರಾಜ ಇವರು ಈ ತರಬೇತಿಯಲ್ಲಿ ಭಾಗವಹಿಸಿದರು.

## ಉಜ್ಜೀವನ ಕಾರ್ಯಕ್ರಮ



ರೈತರಿಗೆ ಕಲಿಕಾ ಕ್ಷೇತ್ರ ಭೇಟಿ ಉಜ್ಜೀವನ ಕಾರ್ಯಕ್ರಮದ ಅಡಿಯಲ್ಲಿ ಅಕ್ಟೋಬರ್ 10 ರಂದು ಕಲ್ಬುರ್ಗಿ ತಾಲೂಕಿನ ಹಾಲಸುಲ್ತಾನಪುರ ಗ್ರಾಮದ ರೈತರಾದ ಶರಣಬಸಪ್ಪ ಪಾಟೀಲ್ ವೈಜ್ಞಾನಿಕ ಕೃಷಿ ಪಂಡಿತ ಪ್ರಶಸ್ತಿ ಪಡೆದ. ಇವರ ಮಾಡಿದಂತ ಕೃಷಿ ಪದ್ಧತಿ ಮತ್ತು ಜೀರೋ ಇನ್ವೆಸ್ಟ್ಮೆಂಟ್ ಹಾಗೂ ಸಾವಯವ ಕೃಷಿ ಸೋಲಾರ್ ಬಳಕೆ ಜೀವ ಅಮೃತ ಮುಂತಾದವುಗಳ ತರಬೇತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಸೇವಾ ಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ದೀಪಕ್ ಅವರು ಮತ್ತು ಶರಣಬಸಪ್ಪ ಪಾಟೀಲ್ ಕೃಷಿ ಪಂಡಿತ ಹಾಗೂ 38 ರೈತರು & ರೈತ ಮಹಿಳೆಯರು ಭಾಗವಹಿಸಿ ತರಬೇತಿಯನ್ನು ಪಡೆದುಕೊಂಡರು.





ದಿನಾಂಕ 19/10/23 ರಂದು ಕಾರ್ಮಿಕ ಇಲಾಖೆಯಲ್ಲಿ ಸಿಡಕ್ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಉದ್ಯಮಶೀಲತಾ ತರಬೇತಿಯನ್ನು ಹಮ್ಮಿಕೊಳ್ಳಲಾಗಿದ್ದು ಸೇವಾ ಸಂಗಮ ಸಂಸ್ಥೆಯಿಂದ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ನಂದಿನಿ ರವರು 14 ಜನ ಮಹಿಳೆಯರನ್ನು ಕರೆದುಕೊಂಡು ಹೋಗಿ ಉದ್ಯಮಶೀಲತಾ ತರಬೇತಿಗೆ ಹಾಜರಾಗಿ ಸ್ವ ಉದ್ಯೋಗ ಯಾವ ರೀತಿಯಲ್ಲಿ ಮಾಡಬೇಕು ಹಾಗೂ ಸರ್ಕಾರದ ಇಲಾಖೆಗಳಲ್ಲಿ ಸೌಲಭ್ಯಗಳನ್ನು ಹೇಗೆ ಪಡೆದು ಕೊಳ್ಳುವುದು( ವಿಶ್ವ ಕರ್ಮ ಯೋಜನೆ PMEGP ಯೋಜನೆ ಬಗ್ಗೆ ಹಾಗೂ ನವಾಡ್ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯಿಂದ) ಸ್ವ ಉದ್ಯೋಗವನ್ನು ರಚಿಸಿಕೊಂಡು ಕುಟುಂಬದ ಬೆಳವಣಿಗೆಗೆ ಪ್ರಾಮುಖ್ಯತೆಯನ್ನು ಕೊಡುವುದು ಈ ತರಬೇತಿಯಲ್ಲಿ ಮಾಹಿತಿಯನ್ನು ಪಡೆದುಕೊಂಡ ನಂತರ ಏಳು ಜನ ಮಹಿಳೆಯರು ಸ್ವ ಉದ್ಯೋಗವನ್ನು ಮಾಡಲು ಒಪ್ಪಿಕೊಂಡಿದ್ದಾರೆ.




ಅಕ್ಟೋಂಬರ್ 30 ಮತ್ತು 31 ರಂದು ಸೇವಾ ಸಂಗಮ ಸಂಸ್ಥೆಯ ಅಡಿಯಲ್ಲಿ ಬರುವ ಉಜ್ಜೀವನ ಕಾರ್ಯಕ್ರಮದ ಕರ್ನಾಟಕ ರಾಜ್ಯ ಮಟ್ಟದ ಸಂಯೋಜಕರಾದ ಶ್ರೀಯುತ ರಾಬರ್ಟ್ ಡಿಸೋಜ ಸರ್ ಅವ್ರು ಸೀತನೂರು ಗ್ರಾಮಕ್ಕೆ ಆಗಮಿಸಿ ಉಜ್ಜೀವನ ಕಾರ್ಯಕರ್ತರು ಗ್ರಾಮಗಳಲ್ಲಿ ಸೇವೆ ಸಲ್ಲಿಸಿರುವ ಬಗ್ಗೆ ಪರಿಶೀಲನೆ ನಡೆಸಿದರು. ನಾಲ್ಕು ಜನ ರೈತರು ಸಾಯುವ ಕೃಷಿ ಮತ್ತು 2 ಜನ ರೈತ ಮಹಿಳಾ ಸ್ವ ಸಹಾಯ ಸಂಘದ ಸದಸ್ಯರು ಕೈತೋಟ ಮಾಡಿದು ಬಗ್ಗೆ ಕೋಳಿ ಸಾಕಾಣಿಕೆ ಬಗ್ಗೆ ನೀರು ಸಂರಕ್ಷಣೆ ಮಾಡುವುದು ಹಾಗೂ ಜೀವಾಮೃತ ಮಾಡಿದ 5 ಜನರ ಹೊಲ ಭೇಟಿ ಮಾಡಿ ಪರಿಶೀಲಿಸಿ ವೀಕ್ಷಣೆ ಮಾಡಿದರು. ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳಾದ ಶ್ರೀಮತಿ ಮಾಲಾಶ್ರೀ ಮೇಡಂ ಅವರು 22 ಜನ ರೈತರಿಗೆ ಕೃಷಿ ಇಲಾಖೆಯ ಸರ್ಕಾರಿ ಸೌಲಭ್ಯಗಳ ಬಗ್ಗೆ ಮತ್ತು ಪ್ರಧಾನ ಮಂತ್ರಿ ಕಿಸಾನ್ ಸನ್ಮಾನ ಯೋಜನೆ ಯಾವ ರೀತಿ ನೊಂದಣಿ ಮಾಡುವುದರ ಬಗ್ಗೆ ಮತ್ತು ರೈತರ ಪಾಸ್ ಬುಕ್ ಮಾಡುವ ಬಗ್ಗೆ ಮಾಹಿತಿಯನ್ನು ತಿಳಿಸಿದರು .





# ಸ್ಪರ್ಶ ಕಾರ್ಯಕ್ರಮ



ಕಲಬುರಗಿ ತಾಲ್ಲೂಕಿನ ಸುತ್ತಮುತ್ತ ಗ್ರಾಮಗಳಾದ ಪರ್ತಾಬಾದ್, ಧರ್ಮಪೂರ್, ನಂದಿಕೂರ್, ಉದನೂರ್, ಹಾಗೂ ಸೇವಾ ಸಂಗಮ, ಸಂಸ್ಥೆಯ ಸಭಾಂಗಣದಲ್ಲಿ, ಅಕ್ಟೋಬರ್ ತಿಂಗಳ ಸ್ಪರ್ಶ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮಲ್ಲಿ ಕ್ಯಾನ್ಸರ್ ಎಂದರೇನು? ಕ್ಯಾನ್ಸರ್ ನಿಂದ ಆಗುವ ಪರಿಣಾಮದ ಕುರಿತು ಮಾಹಿತಿ ನೀಡಲಾಯಿತು. ಕ್ಯಾನ್ಸರ್ ರೋಗ ಬರಲು ಕಾರಣವಾಗುವ ವಿಷಯಗಳ ಬಗ್ಗೆ ತಿಳಿಸಿ, ಹಾಗೂ ಪ್ಲಾಸ್ಟಿಕ್‌ನ ಅತಿಯಾದ ಬಳಕೆಯ ಮೂಲಕವು ಕ್ಯಾನ್ಸರ್ ಸಂಭವಿಸುತ್ತದೆ ಎಂದು ಜಾಗೃತಿ ಮೂಡಿಸಲಾಯಿತು, ಆಧುನಿಕ ಜೀವನ ಶೈಲಿಯ ಭಾಗಗಳಾದ ಬೇಕರಿ ತಿನಿಸುಗಳು ಆರೋಗ್ಯಕರ ಜೀವನ ಶೈಲಿಯ ಮೇಲೆ ಅಡ್ಡ ಪರಿಣಾಮ ಬೀರುತ್ತವೆ ಎಂದು ತಿಳಿಸಿದರು, ಉತ್ತಮ ಆರೋಗ್ಯಕ್ಕಾಗಿ ಮನೆಯಲ್ಲಿ ಕೈತೋಟ ಮಾಡುವುದರಿಂದ ಆಗುವ ಲಾಭಗಳ ಕುರಿತು ಈ ಕಾರ್ಯಕ್ರಮದಲ್ಲಿ ಮಾಹಿತಿ ನೀಡಿದರು. ಇದೆ ಸಂದರ್ಭದಲ್ಲಿ ಕ್ಯಾನ್ಸರ್ ನಿಂದ ಬಳಲುತ್ತಿರುವ ಬಡ ಕುಟುಂಬದ ರೋಗಿಗಳಿಗೋಸ್ಕರ 30 ರೂಪಾಯಿ ದೇಣಿಗೆ ಸಂಗ್ರಹಣೆ ಮಾಡಲಾಯಿತ್ತು. ಈ ಎಲ್ಲಾ ಕಾರ್ಯಕ್ರಮದಲ್ಲಿ ಒಟ್ಟು 173 ಜನ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.






## ಸಂವಿಧಾನ ಮೌಲ್ಯಗಳ ಕುರಿತು ಅರಿವು ಕಾರ್ಯಕ್ರಮ:



ಸ್ವ–ಸಹಾಯ ಸಂಘದ ಮಹಿಳೆಯರಿಗೆ ಸಂವಿಧಾನದ ಮೌಲ್ಯಗಳು ಹಾಗೂ ಸಂವಿಧಾನದ ಪೂರ್ವ ಪೀಠಿಕೆಯಲ್ಲಿರುವ ಅಂಶಗಳ ಕುರಿತು ಮಾಹಿತಿ ನೀಡಿದರು ಮತ್ತು ಮೂಲಭೂತ ಹಕ್ಕುಗಳ ಬಗ್ಗೆ ವಿವರವಾಗಿ ಚರ್ಚಿಸಿ ಲಿಂಗ ತಾರತಮ್ಯದ ಬಗ್ಗೆ ಮಾಹಿತಿ ನೀಡಿ "ಹೀಗೇಕೆ ಹೀಗಿರಲ್ಲಿ" ಎಂಬ ಚಿತ್ರಪಟಗಳ ಮೂಲಕ ಲಿಂಗ ಸಮಾನತೆಯ ಬಗ್ಗೆ ವಿವರಿಸಿದರು. ಈ ಕಾರ್ಯಕ್ರಮದಲ್ಲಿ 15 ಜನ ಭಾಗವಹಿಸಿದರು.

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುನರ್ವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು,
ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತವೆ.
ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೆಂಟರ್
ಪ್ರತಿ ತಿಂಗಳು 4000/- ವರ್ಷಕ್ಕೆ 40,000/-



ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಮಗು
ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

DONATE NOW

| | |
|---|---|
| Name | : Sevasangama Development Society |
| Account No | : 16040100022902 |
| IFSC Code | : FDRL0001604 |
| Bank | : Federal Bank |
| Branch | : Super Market Kalaburagi |

**Fr. Victor Anil Vas**
Director, Seva Sangama & ORBIT


Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in

